ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾವು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟು ಮೂರು ದಿವಸ ಆಯಿತು. ತಾವು ಈ ದಿವಸ, ಇವತ್ತು ನಾಳೆ ಎಂದು ಹೇಳುತ್ತಿದ್ದೀರಿ. ನಾಳೆ ದಿವಸ ಮತ್ತೊಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟರೆ ಮುತ್ತೆ ಇದು ಹಿಂದೆ ಹೋದರೆ ಏನು ಮಾಡುತ್ತೀರಿ? ನಾಳೆ ದಿವಸ ಅಡ್ಜರ್ನ್‌ಮೆಂಟ್ ಮೋಷನ್, ಏನೇ ಬಂದರೂ ಇದನ್ನು ತೆಗೆದುಕೊಳ್ಳುತ್ತೇನೆ ಎಂದರೆ ಪರವಾಗಿಲ್ಲ.

ಅಧ್ಯಕ್ಷರು.—ನಾಳೆ ನಿಮಗೆ ಮೊದಲನೆಯ ಅವಕಾಶ ಕೊಡುತ್ತೇನೆ, ತಾವು ಈಗ ಕುಳಿತುಕೊಳ್ಳಿ.

ಈಗ ಗಮನಸೆಳೆಯುವ ಸೂಚನೆಗಳು. ಶ್ರೀ ಜಿ.ಎಸ್. ಆಚಾರ್, ಶ್ರೀ ಡಿ. ಟಿ. ಜಯಕುಮಾರ್, ನಿಮ್ಮ ಸೂಚನೆಗಳನ್ನು ನಾಳೆ ತೆಗೆದುಕೊಳ್ಳುತ್ತೇನೆ. ಆರ್. ವೆಂಕಟರಾಮಯ್ಯನವರೇ ತಮ್ಮ ಕಾಲಿಂಗ್ ಅಟೆನ್‌ಷನ್. ತಾವು ಕೇಳಿ.

ಗಮನ ಸೆಳೆಯುವ ಸೂಚನೆ

(೧) ಸ್ಟೈಪೆಂಡರಿ ಗ್ರಾಜುಯೇಟ್ಸ್ ಧರಣಿ ಸತ್ಯಾಗ್ರಹ ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಮಾನ್ಯ ಅಧ್ಯಕ್ಷರೇ ಸ್ಟೈಪೆಂಡರಿ ಗ್ರಾಜುಯೇಟ್ಸ್ ೧೦ ಸಾವಿರ ಜನ, ಕಬ್ಬನ್‌ಪಾರ್ಕ್‌ನಲ್ಲಿ ಕುಳಿತಿದ್ದಾರೆ. ಇಂದಿನಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಪನ್ನು ಸೆಳೆಯುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಚಾರದಲ್ಲಿ ನಾನೂ ಸಹ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸ್ಟೈಪೆಂಡರಿ ಗ್ರಾಜುಯೇಟ್ಸ್ ಸಮಸ್ಯೆ ಹೊಸದೇನೂ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸ್ಟೇಟ್‌ಮೆಂಟ್ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಓರಲ್ ಆಗಿ ಹೇಳುತ್ತೇನೆ. ಇದು ಹೊಸದೇನೂ ಅಲ್ಲ. ಇದು ಬಹಳ ವರ್ಷಗಳಿಂದ ನಡೆದು ಬಂದ ಸಮಸ್ಯೆ. ಕಳೆದ ಮೂರೂವರೆ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಅವರಿಗೆ ಕಾಯಿದೆ ವೇರೆಗೆ ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ನಾವು ಮಾಡಿದ್ದೇವೆ. ನಮಗೆ ಇವರ ಸೇವೆಯನ್ನು ಸ್ಥಿರೀಕರಣಗೊಳಿಸುವುದಕ್ಕೆ ಇರತಕ್ಕಂಥ ಮುಖ್ಯವಾದ ತೊಂದರೆ ಹೈಕೋರ್ಟಿನಲ್ಲಿ ಆದಂಥ ಜಡ್ಜ್‌ಮೆಂಟ್. ಇವರನ್ನು ಖಾಯಂ ಮಾಡಬೇಕು ಮುತ್ತು ಇವರ ಜೊತೆಗೆ ಲೋಕಲ್ ಕ್ಯಾಂಡಿಡೆಟ್ಸ್‌ನ್ನು ಖಾಯಂ ಮಾಡಬೇಕು ಎಂದು ಯೋಚನೆ ಮಾಡಿದಾಗ, ನಿರ್ಧಾರ ತೆಗೆದುಕೊಂಡಾಗ, ಬೇರೆಯವರು ಹೈಕೋರ್ಟ್‌ಗೆ ರಿಟ್ ಅರ್ಜಿ ಹಾಕಿ, ಅದರಲ್ಲಿ ಆಗಿರತಕ್ಕಂಥ ನಿರ್ಣಯ ಏನೆಂದರೆ, ಖಾಲಿ ಇರತಕ್ಕಂಥ ಹುದ್ದೆಗಳಲ್ಲಿ ಶೇಕಡ ೫೦ ರಷ್ಟನ್ನು ಸ್ಟೈಪೆಂಡರಿ ಪದವೀಧರರು ಮತ್ತು ಸ್ಥಾನೀಕ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ವಿಾಸಲಿಡಬೇಕು ಎಂಬುದು. ಈಗ ಅವರು ಏನಿದ್ದಾರೆ ಈ ೫೦ ಪರ್ಸೆಂಟ್‌ನಲ್ಲಿ ಅವರನ್ನು ಆಯ್ಕೆ ಮಾಡಬೇಕೆಂದು ಹೇಳತಕ್ಕ ತೀರ್ಮಾನ. ಇವರಿಗೆ ೧೯೮೧ನೇ ಇಸವಿಯಲ್ಲಿ ೧೫೦ ರೂಪಾಯಿಗಳು ಸಿಗುತ್ತಿತ್ತು. ಆಗ ಇವರಿಗೆ ಯಾವ ತರಹ ವಿಶೇಷ ಜವಾಬ್ದಾರಿ ಇವರ ಮೇಲೆ ಹಾಕಿರಲಿಲ್ಲ. ಸೇವಾ ನಿಯಮಗಳು ಇವರಿಗೆ ಅನ್ವಯಿಸುತ್ತಿರಲಿಲ್ಲ. ನಮ್ಮ ಸರಕಾರ ಬಂದಮೇಲೆ ಇವರ ತೊಂದರೆಗಳನ್ನು ತಿಳಿದು ಇವರ ವೇತನವನ್ನು ನಾವು ಹೆಚ್ಚು ಮಾಡಿದ್ದೇವೆ. ಎರಡು ಸಲ ಮಾಡಿದ್ದೇವೆ. ೧೯೮೪ರಲ್ಲಿ ೨೦೦ ರೂಪಾಯಿಗಳಿಂದ ೩೦೦ ರೂಪಾಯಿವರೆಗೆ, ಆದೇ ೪ಳರ ಡಿಸೆಂಬರ್ ತಿಂಗಳಲ್ಲಿ ೩೦೦ ರೂಪಾಯಿಗಳಿಂದ ೪೯೦ ರೂಪಾಯಿಗಳವರೆಗೆ ಮಾಡಿದ್ದೇವೆ. ಪ್ರಯಾಣ ಮಾಡತಕ್ಕಂಥ ಭತ್ಯವನ್ನೂ ಅವರಿಗೂ ಕೊಡುತ್ತೇವೆ. ಮುತ್ತು ಇವರಿಗೆ ಸರಕಾರಿ ಸೇವೆಯಲ್ಲಿ ಖಾಯಂ ಆಗಿ ಸೇರಲಿಕ್ಕೆ ಜೊಂದರೆ ಆಗಕೂಡದು ಎಂದು ಹೇಳತಕ್ಕಂಥ ದೃಷ್ಟಿಯಿಂದ ಇವರ ವಯಸ್ಸಿನ ನಿರ್ಬಂಧವನ್ನೂ ತೆಗೆದುಹಾಕಿದ್ದೇವೆ, ವಯೋಮಿತಿಯನ್ನು ಏರಿಸಿದ್ದೇವೆ. ಈಗ ಅವರ ಬೇಡಿಕೆ ಏನೆಂದರೆ ತಮ್ಮನ್ನು ಖಾಯಂ ಮಾಡಿ ಎಂದು. ಈ ವಿಚಾರ ಪುನಃ ನಾನು ನಮ್ಮ ಸಂಪುಟದ ಮುಂದೆ ಬರುವ ಸಭೆಯಲ್ಲಿ ಅಥವಾ ಅದಕ್ಕೂ ಮುಂದಿನ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಬಯಸಿದ್ದೇನೆ. ಬೇರೆ ಬೇರೆ ರೀತಿಯಿಂದ ವಿವರವನ್ನು ತರಿಸಿದ್ದೇವೆ. ಅದರೆ ಒಂದು ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಒಂದು ಆರ್ಡರ್‌ನ್ನು ಹೊರಡಿಸಿ ಅವರನ್ನು ನಾವು ಖಾಯಂ ಮಾಡತಕ್ಕದ್ದು ಸಾಧ್ಯವಾಗುವುದಿಲ್ಲ. ಅದು ಸಾಧ್ಯವಾಗುವುದಿಲ್ಲ. ಅದು ಹೈಕೋರ್ಟಿನ ತೀರ್ಪಿಗೆ ವಿರುದ್ಧವಾಗುತ್ತದೆ. ಅದಕ್ಕೆ ಮಾನ್ಯ ಸದಸ್ಯರೇ ನಾದರೂ ದಾರಿ ತೋರಿಸಿದರೆ ಒಳ್ಳೆಯದು. ಹಿಂದೆಯೂ ಸಹ ನಾನು ಈ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಿದ್ದೆ. ಈ ಬಗ್ಗೆ ನಮ್ಮ ಪಕ್ಷದ ೩-೪ ಜನ ಮಾನ್ಯ ಸದಸ್ಯರು ಈ ಬಗ್ಗೆ ಬಹಳ ಆಗ್ರಹಪೂರ್ವಕವಾಗಿ ಹೇಳಿದರು. ಅದಕ್ಕೆ ನಾನೇನು ಹೇಳಿದೆ ಎಂದರೆ ನೀವು ಕಾನೂನು ಕಾರ್ಯದರ್ಶಿಯವರ ಬಳಿ ಹೋಗಿ ಚರ್ಚೆ ಮಾಡಿ. ನಾವು ಸರ್ಕಾರದ ಪತಿಯಿಂದ ಚರ್ಚೆ ಮಾಡಿದ್ದೇವೆ. ಕಾಯ್ದೆಗೆ ವಿರುದ್ಧವಲ್ಲದ ಯಾವುದಾದರೊಂದು ದಾರಿ ಇದ್ದರೆ ಸರ್ಕಾರ ಅದನ್ನು ಒಪ್ಪಿಕೊಳ್ಳುತ್ತದೆಂದು ಸಹ ಹೇಳಿದ್ದೇನೆ. ಸ್ವೀಪರ್ಸ್ ಯೂನಿಯನ್ ಸಂಘದ ಅಧ್ಯಕ್ಷರು ಅನೇಕ ಸಲ ನನ್ನನ್ನು ಭೇಟಿ ಮಾಡಿದ್ದಾರೆ. ನಾನು ಜಿಲ್ಲಾ ಮಟ್ಟದಲ್ಲಿ ಪ್ರವಾಸ ಮಾಡತಕ್ಕಂಥ ಕಾಲದಲ್ಲಿ ಸಹ ಅಲ್ಲಿನ ಅಧ್ಯಕ್ಷರುಗಳು ಒಂದು ನನ್ನನ್ನು ಭೇಟಿ ಮಾಡಿದ್ದಾರೆ. ಆಗ ನಾನು ಅವರಿಗೆಲ್ಲಾ ಒಂದು ಸೂಚನೆಯನ್ನು ಕೊಟ್ಟೆ, ಆ ಸೂಚನೆಯಾದರೂ ಏನೆಂದರೆ ನೀವು ಕಾಂಟ್ರಾಕ್ಟ್ ಮೇಲೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಾದರೆ ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬಹುದೆಂದು ಹೇಳಿದ್ದೆ. ಆ ಸೂಚನೆ ಅವರಿಗೆ ಒಪ್ಪಿಗೆಯಾದ ರೀತಿ ಕಾಣಲಿಲ್ಲ. ಈಗ ಸುಮಾರು ೧೪ ಸಾವಿರ ಜನ ಸ್ವೀಪರ್ಸ್ ಇದ್ದಾರು. ಅವರಲ್ಲಿ ಸುಮಾರು ೫,೫೫೫ ಜನ ಈಗಾಗಲೇ ಸರ್ಕಾರಿ ನೌಕರಿಗೆ ಆಯ್ಕೆಯಾಗಿದ್ದಾರೆ. ಇನ್ನು ಇರತಕ್ಕಂಥ ಎಂಟು ಸಾವಿರಕ್ಕೂ ಸ್ವಲ್ಪ ಹೆಚ್ಚು ಜನರಿದ್ದಾರೆ. ಅವರ ಜೊತೆಗೆ ಈಗ ಸ್ಥಾನೀಕ ಅಭ್ಯರ್ಥಿಗಳು ಸಹ ಇದ್ದಾರೆ. ಈಗ ನಮಗಿರತಕ್ಕಂಥ ತೊಂದರೆಯಾದರೂ ಏನೆಂದರೆ ಸರ್ಕಾರಿ ಹುದ್ದೆಗಳು ಖಾಲಿ ಇರಬೇಕು. ಒಂದು ವೇಳೆ ಖಾಲಿ ಇರತಕ್ಕಂಥ ಹುದ್ದೆಗಳನ್ನು ರಿಕ್ರೂಟ್‌ಮೆಂಟ್ ಮಾಡುವುದರಲ್ಲಿ ಸ್ವಲ್ಪ ತಡವಾಗಬಹುದು ಇದರಿಂದ ಸರ್ಕಾರಿ ಕೆಲಸಕ್ಕೆ ತಡವಾಗಬಹುದೆನ್ನುವ ದೃಷ್ಟಿಯಿಂದ ಇವರನ್ನು ಸಹ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಈಗ ಯಾವುದಾದರೊಂದು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ತೊಂದರೆಯಾಗಬಾರದೆನ್ನುವ ದೃಷ್ಟಿಯಿಂದ ಅಲ್ಲಿನ ಅವಶ್ಯಕತೆಗೆ ಅನುಗುಣವಾಗಿ ಕೆಲವು ಜನರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಿಸುತ್ತೇವೆ. ಅವರು ಒಂದೆರಡು ವರ್ಷಗಳ ಕಾಲ ಸುಮ್ಮನಿದ್ದು ತರುವಾಯ ನಮ್ಮನ್ನು ಪರ್ಮನೆಂಟ್ ಮಾಡಿ ಎಂದು ಧರಣಿ ಮಾಡುತ್ತಾರೆ. ಆದೇ ರೀತಿಯಲ್ಲಿ ಕಾಂಟ್ರಾಕ್ಟ್ ಟೀಚರ್ಸ್‌ಅನ್ನು ನೇಮಕ ಮಾಡುತ್ತೇವೆ. ಇದರ ಉದ್ದೇಶವೇನು ? ಅವರು ಕಾಂಟ್ರಾಕ್ಟ್ ಮೇಲೆ ಕೆಲಸ ಮಾಡುವುದಾದರೆ ಅವರ ಜೀವನ ಪರ್ಯಂತ ಬೇಕಾದರೆ ಕೆಲಸ ಮಾಡಲಿ ಆದನ್ನು ಬೇಕಾದರೆ ಪರಿಶೀಲನೆ ಮಾಡಬಹುದು. ಅದು ಬಿಟ್ಟು ಅವರು ಕೆಲಸಕ್ಕೆ ಸೇರಿ ಎರಡು ವರ್ಷಗಳಾಯಿತೆಂದರೆ ಪರ್ಮನೆಂಟ್ ಮಾಡಿಕೊಳ್ಳಿ ಎಂದು ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಇದು ಸಮಂಜಸವಾದ ವಿಚಾರವಲ್ಲ. ನಾವು ಒಂದು ಕಾಯ್ದಿಟ್ಟ ಕಟ್ಟಲೆಯ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಕ್ರಮಬದ್ಧವಾಗಿ ನೇಮಕಾತಿಯನ್ನು ಮಾಡಬೇಕಾಗುತ್ತದೆ. ಕ್ರಮಬದ್ಧವಾಗಿ ನೇಮಕಾತಿಯನ್ನು ಮಾಡದಿದ್ದರೆ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತದೆ. ಹರಿಜನ ಮತ್ತು ಗಿರಿಜನರಿಗೆ ಅನ್ಯಾಯವಾಗುತ್ತದೆ. ಇಂತಹ ಅನೇಕ ಸಮಸ್ಯೆಗಳು ಇವೆ. ಅದಕ್ಕಾಗಿಯೇ ನಾನು ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ ಕಾಯ್ದೆಗೆ ಅನುಗುಣವಾವಂಥ ಯಾವುದಾದರೂ ಸೂಚನೆ ಇದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಆದನ್ನು ಮರೆತಿರುವಂತಿದೆ. ಹಿಂದೆ ಕಾನೂನು ಕಾರ್ಯದರ್ಶಿಗಳಾಗಿ ಶ್ರೀ ಚಾಮಯ್ಯನವರು ಇದ್ದರು. ಅವರಿಗೆ ಮಾನ್ಯ ಮುಖ್ಯಮಂತ್ರಿಗಳೇ ಹೇಳಿ ಇನ್ನು ೨ ತಿಂಗಳಲ್ಲಿ ಏನಾದರೂ ಮಾಡಿ ಇವರನ್ನು ಖಾಯಂ ಮಾಡುವಂತಹ ಒಂದು ದಾರಿ ನೋಡಿ ಎಂದು ಹೇಳಿದರು, ಆದಕ್ಕೆ ಶ್ರೀ ಚಾಮಯ್ಯನವರು ಸಹ ಒಪ್ಪಿಕೊಂಡರು. ಈಗ ಶ್ರೀ ಚಾಮಯ್ಯನವರು ಬೇರೆ ಕಡೆ ವರ್ಗವಾಗಿದ್ದಾರೆ. ಈಗ ಹೊಸ ಕಾನೂನು ಕಾರ್ಯದರ್ಶಿಗಳು ಬಂದಿದ್ದಾರೆ. ಅವರು ಬಂದು ೩-೪ ತಿಂಗಳಾಗಿದೆ. ಅವರಿಗೆ ಆ ಫೈಲು ಇನ್ನೂ ಹೋಗಿಲ್ಲ. ಆ ಕೆಲಸವನ್ನು ಒಂದು ವೇಳೆ ಶ್ರೀ ಈಶ್ವರಭಟ್ಟರಿಗೆ ವಹಿಸಿದ್ದಾರೋ ಏನೋ ಅದೂ ಸಹ ನನಗೆ ಗೊತ್ತಿಲ್ಲ. ಈಗ ಲೋಕೋಪಯೋಗಿ ಇಲಾಖೆಯಲ್ಲಿ ಗ್ಯಾಂಗ್‌ಮೆನ್‌ಗಳನ್ನು ಎನ್.ಎಂ.ಆರ್.ಗಳನ್ನು ಖಾಯಂ ಮಾಡಲಿಲ್ಲವೇ ? ಅದೇ ರೀತಿ ಇವರನ್ನು ಸಹ ಖಾಯಂ ಮಾಡಬಾರದೇಕೆ ? ಇವರು ಸುಮಾರು ೧೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ದೇವರಾಜ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರಿಗೆ ಪೂಜೆ ಪುರಸ್ಕಾರವೆಲ್ಲಾ ಮಾಡಿದರು, ತದನಂತರ ಗುಂಡೂರಾಯರಿಗೆ ತುಲಾಭಾರ ಮಾಡಿದರು. ಆದರೂ ಅವರ ಕೆಲಸವಾಗಲಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇವರ ಬಗ್ಗೆ ಸಹಾನುಭೂತಿ ತೋರಿಸಿ ನ್ಯಾಯ ಒದಗಿಸಿಕೊಡಬೇಕು. ಹಿಂದೆ ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಹೈಕೋರ್ಟಿನ ತೀರ್ಪಿನಕ್ಕೆ ನಾವು ಮಾಡುವ ಕೆಲಸ ಅಡ್ಡಿ ಬರುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ಕೋದ ಸಾರಿ ನಾವೆಲ್ಲಾ ಇದರ ಬಗ್ಗೆ ಮಾತನಾಡಿದ್ದೇವೆ,

ಅಧ್ಯಕ್ಷರು.—ಇದರ ಬಗ್ಗೆ ಆ ಕಡೆಯವರು ಮಾತನಾಡಿದ್ದಾರೆ, ಈ ಕಡೆಯವರು ಮಾತನಾಡಿದ್ದಾರೆ, ತಾವು ಬ್ರೀಫ್‌ಆಗಿ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಇವನ್ನೆಲ್ಲಾ ಲೋಕಲ್ ಆಗಿ ಪರಿಗಣಿಸಿ ರೆಗ್ಯುಲರೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಮಾಪ-ಆಳಿಯ ಎಲ್ಲರೂ ಕೆಲಸ ಮಾಡುತ್ತಿದ್ದಾರೆ, ಬಹಳ ಜನಕ್ಕೆ ಮಕ್ಕಳು ಕೂಡ ಇದ್ದಾರೆ.

ಅಧ್ಯಕ್ಷರು.—ಸಾಕು ತಾವು ಕುಳಿತುಕೊಳ್ಳಿ. ಮಾನ್ಯ ಭೂಪತಿಯವರೇ ನೀವು ಹೇಳಿ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಈ ಸ್ಕೈಪೆಂಡರಿ ಬಗ್ಗೆ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಚಿನಿವಾರ ಪ್ರಾಣಾಳಿಕೆಯಲ್ಲಿ ಕೆಲವು ಆಲ್ಟಾಸನೆಗಳು ಇತ್ತೆಂದು ನಾನು ಭಾವಿಸಿದ್ದೇನೆ. ಅನಂತರ ಈಗ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ಹೈಕೋರ್ಟ್ ತೀರ್ಪಿನಿಂದ ಕೆಲವು ತೊಂದರೆ ಇವೆ, ಇವರನ್ನು ಖಾಯಂ ಮಾಡುವುದಕ್ಕೆ ಕಾನೂನು ಅಡ್ಡಿ ಬರುತ್ತದೆ, ಮುಂದಿನ ಅಥವಾ ಆ ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಈ ವಿಚಾರವನ್ನು ನೋಡುತ್ತೇವೆಂದು ಹೇಳಿದ್ದಾರೆ. ಹೈಕೋರ್ಟು ತೀರ್ಪು ಯಾವಾಗ ಬಂತು ? ಈ ತೀರ್ಪು ಬರುವುದಕ್ಕೆ ಮುಂಚೆ ಈ ವಿಷಯವನ್ನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತರುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ ? ಆನಂತರ ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸ ಮಾಡಿಸುವುದಕ್ಕೆ ತಯಾರಿದ್ದಿರೆ ಅದನ್ನು ಪರಿಶೀಲಿಸುತ್ತೇವಾಗಿ ಹೇಳಿದ್ದೀನೆಂದು ಮುಖ್ಯಮಂತ್ರಿಗಳು ಹೇಳಿದರು. ಈಗಾಗಲೇ ಕಾಂಟ್ರಾಕ್ಟ್ ಆದವನನ್ನು ಶಿಕ್ಷಣ ಇಲಾಖೆಯಿಂದ ತೆಗೆದು ಮೊನ್ನೆತಾನೆ ದೊಡ್ಡ ರಾದ್ಧಾಂತ ವಾಯಿತು ಶಿಕ್ಷಣ ಸಚಿವರು ಸಹ ಇನ್ನು ಮುಂದೆ ಕಾಂಟ್ರಾಕ್ಟ್ ಆಧಾರದ ಮೇಲೆ ಯಾರನ್ನೂ ನೇಮಕ ಮಾಡಿಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಕಾಂಟ್ರಾಕ್ಟ್ ಕೆಲಸದ ಮೇಲೆ ಇದ್ದ ೧೩ಳಿ ಜನರನ್ನು ತೆಗೆದು ಹಾಕಲಾಗಿದೆ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಯು. ಭೂಪತಿ.—ಕಾಂಟ್ರಾಕ್ಟ್ ಮೇಲೆ ತೆಗೆದುಕೊಳ್ಳುವ ಲಿಂಕ್ ಮಾಡಿದ್ದರಿಂದ ಹೇಳುತ್ತಿದ್ದೇನೆ. ಒಂದು ಕಾಂಟ್ರಾಕ್ಟ್ ಮೇಲೆ ಕೆಲಸ ಮಾಡುವವರ ಸ್ಥಿತಿ ಅನಿಶ್ಚಿತತೆಯಿಂದ ಇರುವಾಗ ಒಂದು ಕಡೆ ಸ್ಕೈಪೆಂಟರಿ ಗ್ಯಾಜುಯೇಟ್ಸ್‌ಗಳನ್ನ ಕಾಂಟ್ರಾಕ್ಟ್ ರೀತಿಯಲ್ಲಿ ಕೆಲಸ ಮಾಡಿರುವುದನ್ನು ಪರ್ಮನೆಂಟ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇಂಥ ಸಮಸ್ಯೆಗಳನ್ನು ತಕ್ಷಣ ಮಾನವೀಯ ದೃಷ್ಟಿಯಿಂದ ನೋಡಿ, ಕಾನೂನಿನ ತೊಡಕನ್ನು ತೆಗೆದುಹಾಕಬೇಕು. ಇದನ್ನು ಮಾಡುವುದು ಸರ್ಕಾರಕ್ಕೆ ದೊಡ್ಡ ಪ್ರಶ್ನೆಯಲ್ಲ. ಅವರೇ ಹೇಳಿದಂತೆ ಇನ್ನೂ ಒಂಭತ್ತು ಸಾವಿರ ಚಿಲ್ಲರೆ ಸ್ಕೈಪೆಂಡರಿ ಗ್ಯಾಜುಯೇಟ್ಸ್‌ಗಳಿದ್ದಾರೆ. ಈಗಾಗಲೇ ೫ ಸಾವಿರ ಜನ ಅಪಾಯಿಂಟ್ ಆಗಿದ್ದಾರೆ. ಉಳಿದಿರುವವರನ್ನೂ ಪಾಯಿಂಟ್ ಮಾಡತಕ್ಕ ಒಂದು ಧೃಢ ನಿಲುವನ್ನು ತಾವು ತಾಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಸುಮಾರು ೧೦ ವರ್ಷ ಗಳಿಂದ ಈ ಸಮಸ್ಯೆ ಪ್ರಾರಂಭವಾಗಿದೆ. They are the lacunae, somehow you have to see that they are absorbed somewhere else. ಹೀಗೆ ಮಾಡಿದರೆ ರೋಸ್ಟರ್ ಪ್ರಕಾರ ಆಗುವುದಿಲ್ಲ ಎನ್ನುವುದು ಎಲ್ಲರಿಗೂಗೊತ್ತು. ಅಟ್‌ಲೀಸ್ಟ್ ಇವರನ್ನು ಲೋಕಲ್ ಕಾಂಡಿಡೇಟ್ಸ್ ಎಂದು ಕನ್ಸಿಡರ್ ಮಾಡಿ ಇಷ್ಟು ಜನರನ್ನೂ ಅಬ್‌ಸಾರ್ಬ್ ಮಾಡಿದ ಮೇಲೆ ಯಾವ ಕೋರ್ಟು ಏನ್ಮಡಬರುವುದಿಲ್ಲವೆಂದು ನನ್ನ ಸಲಹೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಲಾ-ಸೆಕ್ರೆಟರಿಯವರು ಮಾತನಾಡಿ ಹೈಕೋರ್ಟ್ ಆರ್ಡ್ಲಿಗೆ ಧಕ್ಕೆ ಬರದ ರೀತಿಯಲ್ಲಿ ನಿಯಮಾವಳಿಯನ್ನು ಹುಡಿಕಿ ಅವರನ್ನು ಪಾಯಂ ಮಾಡಬೇಕು. ತಾವು ಮನಸ್ಸು ಮಾಡಿದರೆ ಇದು ಆಗುವಂಥ

ಕೆಲಸ. ವಿರೋಧ ಪಕ್ಷದವರು ತಂದಿರುವ ವಿಷಯವನ್ನು ಇದು ಬಹಳ ಗಂಭೀರವಾದ ಸಮಸ್ಯೆ ಎಂದು ತಿಳಿದುಕೊಂಡು ತಾವು ಇಷ್ಟು ಹೊತ್ತು ಕುಳಿತು ಗಂಭೀರವಾಗಿ ಚಿಂತನೆ ಮಾಡಿದ್ದೀರಿ. ಮೊದಲು ಇವರಿಗೆ ಕೊಡುತ್ತಿದ್ದ ೧೫೦ ರೂಪಾಯಿಗಳು ಇವತ್ತಿನ ದಿವಸ ೪೯೦ ರೂಪಾಯಿಗಳಾಗಿವೆ. ಈ ೪೯೦ ರೂಪಾಯಿಗಳಲ್ಲಿ ಅವರು ಯಾವ ರೀತಿ ಜೀವನ ಮಾಡಬೇಕು? ಆದ್ದರಿಂದ ಕ್ಷಣ ತಾವು ಇದರ ಬಗ್ಗೆ ಗಮನ ಕೊಟ್ಟು ಕ್ಯಾಬಿನೆಟ್ ವಿಸ್ತರಣೆಯನ್ನು ಕರೆದು ಈ ಮಹತ್‌ಕಾರ್ಯವನ್ನು ಮಾಡಬೇಕು. ಇದು ಸ್ಟೈಪೆಂಡರಿ ಗ್ರಾಜುಯೇಟ್ಸ್‌ರಳ ಆಳಿವು, ಉಳಿವಿನ ಪ್ರಶ್ನೆಯಾಗಿದೆ. ಇದನ್ನು ಗಮನಿಸಿ ತಮ್ಮ ಕಾಲದಲ್ಲಾದರೂ ಇದಕ್ಕೆ ಒಂದು ಸೆಲ್ಯೂಷನ್ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇದು ಜೀವನದ ಪರಿಸ್ಥಿತಿ. ನಾವು ಪದೇ ಪದೇ ಹೇಳುವಂಥ ಅಗತ್ಯ ಇಲ್ಲ. ದಯವಿಟ್ಟು. ಇನ್ನೊಮ್ಮೆ ಇವರು ಧರಣಿ ಸತ್ಯಾಗ್ರಹ ಬರದ ರೀತಿಯಲ್ಲಿ ತಾವು ಸೆಲ್ಯೂಷನ್ ಹುಡುಕಬೇಕು. ಕನಿಷ್ಟ ಪಕ್ಷ ಅವರಿಗೆ ಬೇಸಿಕ್‌ಗಿಂತ ೧೦ ರೂಪಾಯಿಗಳ ಸಂಬಳ ವಾದರೂ ಸಿಗುವಂತೆ ಒಂದು ಏರ್ಪಾಡು ಮಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ.....

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯಲ್ಲಿ ತಪ್ಪು ಹೆಸರು ಇಲ್ಲ...

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ. ಅವರಿಗೆ ಅವಕಾಶವನ್ನು ಕೊಟ್ಟರೆ ನಮಗೂ ಕೊಡಬೇಕಾಗುತ್ತದೆ. ನಮ್ಮ ಕಡೆಯವರೂ ಕೂಡ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಯಾರಿಗೂ ಅವಕಾಶ ಕೊಡುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ...

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇಷ್ಟೂ ಜನ ಮಾನ್ಯ ಸದಸ್ಯರುಗಳವರಿಗೂ ಅವಕಾಶವನ್ನು ತಾವುಗಳು ಕೊಟ್ಟಲ್ಲಿ, ಅವರೆಲ್ಲರೂ ವ್ಯಕ್ತಪಡಿಸುವ ಅಭಿಪ್ರಾಯ ಒಂದೇ ಎಂದು ನಾನು ನಂಬಿದ್ದೇನೆ. ಮಾನ್ಯ ಭೂಪತಿಯವರು ಹೇಳಿದರು, ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯ ಲ್ಲಿ ಈ ಒಂದು ಭರವಸೆಯನ್ನು ಹಾಕಿದ್ದರು ಎಂದು. ಹೈಕೋರ್ಟ್‌ನಲ್ಲಿ ನಮ್ಮ ನಿರ್ಣಯವನ್ನು ಕಿತ್ತು ಹಾಕಿದರೆ ಚುನಾವಣಾ ಪ್ರಣಾಳಿಕೆಯಲ್ಲಿರುವ ಮಾತನ್ನು ನಡೆಸುವುದು ಹೇಗೆ? ಹೈಕೋರ್ಟ್‌ನಲ್ಲಿ ನಮ್ಮ ಅಧಿಕಾರ ಇಲ್ಲ. ಹಾಗೆಯೇ ಮಾನ್ಯ ವೆಂಕಟರಾಮಯ್ಯನವರು, ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಹೈಕೋರ್ಟ್ ತನ್ನ ಒಂದು ತೀರ್ಮಾನದಲ್ಲಿ ಇನ್ನು ಮುಂದೆ ಲೋಕಲ್‌ಕ್ಯಾಂಡಿಡೇಟ್ಸ್ ಆಗಿ ಯಾರನ್ನೂ ನೇಮಕ ಮಾಡಕೂಡದು ಎಂದು ಹೇಳಿದ್ದಾರೆ. ಇನ್ನು ಮುಂದೆ ಸ್ಥಳೀಯ ಅಭ್ಯರ್ಥಿಗಳು ಎಂದು ನೇಮಕ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಇತ್ತೀಚೆಗೆ ಅಧ್ಯಾಪಕರತ್ನರನ್ನು ನೇಮಿಸಿಕೊಳ್ಳುವಾಗ ಹಿಂದೆ ಮಾಡಿಕೊಂಡು ಬಂದಹಾಗೆ ಮಾಡಬಹುದಾಗಿತ್ತು. ಆದರೆ ಹೈಕೋರ್ಟ್ ನಿರ್ಣಯದಂತೆ ಅವರನ್ನು ನೇಮಕ ಮಾಡಲಾಯಿತು. ಹಾಗೆಯೇ ಗ್ಯಾರಂಟಿಮಾನ್‌ಗಳಿಗೆ ಖಾಯಂ ಮಾಡಿದ್ದೀರಿ ಎಂದು ಹೇಳಿದರು. ಹಾಗೆ ಮಾಡಿದ್ದಾರೆ, ಹೇಗೆ ಎಂದರೆ. ಯಾರು ಅದರಲ್ಲಿ ಅನಕ್ಷರಸ್ಥರು ಇದ್ದಾರೆ ಅಂತಹವರನ್ನು ಮಾತ್ರ ಖಾಯಂ ಮಾಡಿದ್ದಾರೆ ಅದೂ ಕೂಡ ದಿನಗೂಲಿಯ ಬದಲಾಗಿ ತಿಂಗಳು ಕೂಲಿ ಎಂದು ಮಾಡಿದ್ದಾರೆ. ಈ ವಿಚಾರವು ಸುಪ್ರೀಂ ಕೋರ್ಟ್‌ನ ಮುಂದಿದೆ. ಅವರನ್ನು ನಾವು ತೆಗೆದುಹಾಕುವ ಹಾಗೆ ಇಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ನಾವು ಮಾಡಬೇಕಾಗುತ್ತದೆ.

ಹಾಗೆಯೇ ಸ್ಟೈಪೆಂಡರಿ ಗ್ರಾಜುಯೇಟ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರುಗಳಿಗೆ ಎಷ್ಟು ಸಹಾನುಭೂತಿ, ಕಳಕಳಿ ಇದೆಯೋ ಅಷ್ಟೇ ಸಹಾನುಭೂತಿ, ಕಳಕಳಿಯು ಸರಕಾರಕ್ಕೂ ಇದೆ. ೧೬ ಸಾವಿರ ಸಂಖ್ಯೆಯ ನಿರುದ್ಯೋಗಿ ಪದವೀಧರರಲ್ಲಿ ಅವರಿಗೆ ಕೊಟ್ಟ ಒಂದು ಸೌಲಭ್ಯದ ಕಾರಣದಿಂದಾಗಿ ೫–೬ ಸಾವಿರ ಜನರಿಗೆ ಈಗಾಗಲೇ ನೌಕರಿ ಸಿಕ್ಕಿದೆ. ಬಾಕಿ ಇರುವವರಿಗೆ ಮುಂದೆ ನೌಕರಿ ಸಿಗಬಹುದು. ನೌಕರಿಯನ್ನು ಕೊಡಿಸತ್ಯಂಥಾದ್ದು ಪಿ. ಎಸ್. ಸಿ. ಅಥವಾ ಇನ್ನಿತರ ಸಮಿತಿಗಳ ಮುಖಾಂತರ. ಒಂದು ವೇಳೆ ಸರಕಾರಿ ನೌಕರಿಯನ್ನು ಪಡೆಯಲಿಕ್ಕೆ ವಯಸ್ಸಿನ ಮಿತಿಯಂನ್ನು ದಾಟಿದ್ದರೆ ಅದನ್ನು ನಾವು ತೆಗೆದುಹಾಕುತ್ತೇವೆ.

ಮಾನ್ಯ ಯಡಿಯೂರಪ್ಪನವರು ಅವರಿಗೆ ಕೊಡುತ್ತಿರುವ ಸಂಬಳವನ್ನಾದರೂ ಇನ್ನೂ ಹೆಚ್ಚು ಮಾಡಿ ಎಂದು ಹೇಳಿದರು. ನನಗೆ ಗೊತ್ತಿದೆ ೪೯೦ ರೂಪಾಯಿಗಳಲ್ಲಿ ಯಾವ ಬ್ರಹ್ಮಚಾರಿಯೇ ಆಗಲೀ, ಸಂಸಾರಂದಿಗನೇ ಆಗಲಿ, ತನ್ನ ಸಂಸಾರವನ್ನು ನಡೆಸುವುದು ಕಷ್ಟ. ಈ ವಿಚಾರ ನಮಗೆ ತಿಳಿದಿದೆ. ಈಗ ಅವರ ಬಗ್ಗೆ ವಿಚಾರ ಮಾಡಿಯೇ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದಾಗಿದೆ. ಅವರಿಗೆ ಹಾಗೆ ನೇಮಿಸಿಕೊಳ್ಳುವಾಗ, ೧೦೦–೧೫೦ ರೂಪಾಯಿಗಳನ್ನು ಸಂಬಳದ ರೂಪದಲ್ಲಿ

ಕೊಟ್ಟು ಅವರಿಗೆ ಸ್ವಲ್ಪ ಅನುಭವ ಆಗಲಿ ಎಂದು ಮಾಡಿದ್ದೀವೆಯೇ ಹೊರತು ಸೈಟ್ಪಂಡರಿ ಗ್ಯಾಜುಯೇಟ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ನೌಕರಿ ಕೊಡುತ್ತೆವೆ ಎಂದು ಯಾವ ಹುಸಿ ಸುಳ್ಳನ್ನೂ, ಆಸೆಯನ್ನೂ ಸರಕಾರ ತೋರಿಸಿಲ್ಲ. ಅವರಲ್ಲಿ ಏನು ವಿಚಾರ ಮಾಡಿದೆ ಎಂದರೆ, ಸರಕಾರದಲ್ಲಿ ಸೇರಿಕೊಂಡಿದ್ದೀವೆ, ಇಪತ್ತಲ್ಲ ನಾಳೆ ಖಾಯಂ ಮಾಡುತ್ತಾರೆ ಎಂಬ ಒಂದು ಆಸೆಯನ್ನು ಇಟ್ಟುಕೊಂಡಿದ್ದಾರೆ. ಏನಿದ್ದರೂ ಸಂಪುಟದ ಮುಂದೆ ಈ ವಿಚಾರವು ಬರುತ್ತದೆ. ಆಗ ಸೂಕ್ತ ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆ ಎಂದು ಹೇಳುಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಇಷ್ಟು ಉದ್ದ ಉತ್ತರವನ್ನು ಹೇಳಿದ್ದಾರೆ...

ಶ್ರೀ ಯು. ಭೂಪತಿ.—ಇಮವರೆಗೆ ಸಂಪುಟದ ಮುಂದೆ ಬಂದಿಲ್ಲ, ಯಾವಾಗ ಈ ವಿಷಯವನ್ನು ತರುತ್ತೀರಿ ?

(ಗೊಂದಲ)

ಅಧ್ಯಕ್ಷರು.—ನೀವು ಹೇಳುವಾವುದೂ ರೆಕಾರ್ಡ್ ಆಗುವುದಿಲ್ಲ. ರೂಲ್ಸು ರೆಗ್ಯುರೇಷನ್ಸ್ ತಪ್ಪಗೆ ಏನೂ ಇಲ್ಲವೇ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ಮಾಡುತ್ತೇವೆಂದು ಹೇಳಿಬಿಟ್ಟರೆ ಸಾಕು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಇದು ಮಾನವೀಯ ಪ್ರಶ್ನೆ. ಇದರ ಬಗ್ಗೆ ತಾವು ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ನೀವು ಯಾರು ಏನು ಹೇಳಿದರು ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ್‌ಕುಮಾರ್.—ಮುಂದಿನ ಸಚಿವಸಂಪುಟ ಸಭೆಯಲ್ಲಿ ಯೋಚನೆ ಮಾಡುತ್ತೆ ವೆಂದು ಮುಖ್ಯಮಂತ್ರಿಗಳು ಆಗಲೇ ಹೇಳಿದ್ದಾರೆ. ಆದರೂ ಇವರು ಏಕೆ ಮಾತನಾಡುತ್ತಾರೆ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟಿನಲ್ಲಿ ಪ್ರಕರಣವಿರುವಾಗ ತೀರ್ಮಾನ ಮಾಡ ಬಹುದೆನ್ನುವ ಒಬ್ಬ ಲೀಗಲ್ ಎಕ್ಸ್‌ಪರ್ಟನ್ನಾದರೂ ಇವರು ತೋರಿಸಿದರೆ ಆಗಲೇ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಕನಿಷ್ಠ ಪಕ್ಷ ಸಂಬಳವನ್ನು ಆದರೂ ಜಾಸ್ತಿಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಸಮಂಜಸವಾದುದಲ್ಲ. ಸಂಬಳ ಜಾಸ್ತಿ ಮಾಡಲು ಅವರೇನು ಖಾಸಗಿ ನೌಕರರೇ ? ಮುಂದಿನ ಸಂಪುಟಸಭೆಯಲ್ಲಿ ಇದನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದರೂ ಇವರು ಹೀಗೆ ಹಠ ಹಿಡಿಯುವುದು ಥರವಲ್ಲ. ನಮಗೇನು ಕಾಳಜಿ ಇಲ್ಲವೆಂದೇ ಇವರು ಭಾವಿಸಿರುವುದು.

(ಗೊಂದಲ)